# ● ಸುದ್ದಿ ಸಂಚಯ ●

## ೧೭.೧೨.೨೦೦೬ರಂದು ನಡೆದ ರಾಮಕೃಷ್ಣ ಮಿಷನ್ನಿನ ಸರ್ವಸದಸ್ಯರ ಸಭೆಯಲ್ಲಿ ಪರಮಪೂಜ್ಯ ಪರಮಾಧ್ಯಕ್ಷರ ಆಶೀರ್ವಚನ



ಆತ್ಮೀಯ ಸೋದರ ಸಂನ್ಯಾಸಿಗಳೆ ಮತ್ತು ಭಕ್ತಬಾಂಧವರೆ,

ಬೇಲೂರು ಮಠದ ಈ ಪವಿತ್ರ ಕ್ಷೇತ್ರದಲ್ಲಿ ನೀವೆಲ್ಲರೂ ಸೇರಿರುವುದನ್ನು ನೋಡಿ ನನಗೆ ಸಂತೋಷವಾಗಿದೆ. ನಾವೆಲ್ಲರೂ ಶ್ರೀರಾಮಕೃಷ್ಣರ ಪವಿತ್ರ ನಾಮದಡಿಯಲ್ಲಿ ಇಲ್ಲಿ ಒಟ್ಟಿಗೆ ಸೇರಿದ್ದೇವೆ. ಸ್ವಾಮಿ ವಿವೇಕಾನಂದರು ಈ ಸಂಸ್ಥೆಗೆ ಶ್ರೀರಾಮಕೃಷ್ಣರ ಹೆಸರನ್ನು ಇಟ್ಟಿದ್ದಾರೆ. ಕಾರಣ, ತಾವು ಮಾಡುತ್ತಿದ್ದ ಎಲ್ಲ ಕೆಲಸಗಳೂ ತಮ್ಮ ಗುರು ದೇವರ ಕೆಲಸವೆಂಬುದನ್ನು ಅವರು ಅರಿತಿದ್ದರು. ಶ್ರೀರಾಮಕೃಷ್ಣರು ಈ ಭುವಿಯಲ್ಲಿ ಅವತರಿಸಿದ ಉದ್ದೇಶವನ್ನು ಸಾಧಿಸುವುದಕ್ಕಾಗಿಯೇ ಸ್ವಾಮಿಜಿ ಬಂದಿದ್ದರು.

ರಾಮಕೃಷ್ಣ ಮಿಷನ್ನಿನಿಂದ ನಡೆಸಲಾಗುತ್ತಿರುವ ಎಲ್ಲ ಸೇವಾಕಾರ್ಯಗಳನ್ನೂ ಶ್ರೀರಾಮಕೃಷ್ಣರ ಪೂಜೆಯೆಂದೇ ಭಾವಿಸಲಾಗುತ್ತದೆ. ಈ ಭಾವನೆ ನಮ್ಮಲ್ಲಿದ್ದರೆ ಎಲ್ಲ ಕೆಲಸಗಳನ್ನೂ ಎಚ್ಚರದಿಂದ ಮುತುವರ್ಜಿ ವಹಿಸಿ ಮಾಡುತ್ತೇವೆ. ಸ್ವಾಮಿಜಿ ತಮ್ಮ ಒಂದು ಪತ್ರದಲ್ಲಿ ಹೇಳುತ್ತಾರೆ: **"ಯಾವುದೇ ಕೆಲಸವನ್ನು ಆರಂಭಿಸುವ ಮೊದಲು ಶ್ರೀರಾಮಕೃಷ್ಣರಲ್ಲಿ ಪ್ರಾರ್ಥಿಸು; ಅವರು ನಿನಗೆ ಸರಿಯಾದ ಮಾರ್ಗ ತೋರುತ್ತಾರೆ."**

ಸ್ವಾಮಿಜಿ ನಾವು ಜನರೊಡನೆ ಹೇಗೆ ವ್ಯವಹರಿಸಬೇಕೆಂದು ಕಲಿಸಿದ್ದಾರೆ: **"ಶಿವಜ್ಞಾನೇ ಜೀವಸೇವಾ"** (ಜನರಲ್ಲಿ ಭಗವಂತನನ್ನು ಕಂಡು ಅವರ ಸೇವೆ ಮಾಡುವುದು). ಈ ರೀತಿಯ ಮನೋಭಾವವನ್ನು ನಾವು ಯಾವಾಗಲೂ ತಾಳಿದರೆ, ಪ್ರತಿಯೊಬ್ಬರನ್ನೂ ನಾವು ಗೌರವಾದರಗಳಿಂದ ಕಾಣುತ್ತೇವೆ.

ಸ್ವಾಮಿಜಿ ನಮ್ಮ ಮುಂದೆ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಅವಳಿ ಆದರ್ಶವನ್ನು ಇಟ್ಟಿದ್ದಾರೆ. ಕೆಲಸಕಾರ್ಯಗಳ ಮಧ್ಯೆ ಮೋಕ್ಷದ, ಮುಕ್ತಿಯ ಆದರ್ಶವನ್ನು ನಾವೆಂದಿಗೂ ಮರೆಯಬಾರದು. ಈ ಆದರ್ಶ ಬರೀ ಸಂನ್ಯಾಸಿಗಳಿಗಾಗಿ ಮಾತ್ರವಲ್ಲ, ಗೃಹಸ್ಥರಿಗೂ ಕೂಡ. ಎಲ್ಲ ಕೆಲಸಗಳನ್ನೂ ಪೂಜೆಯಂತೆ ನೇಮದಿಂದ ಮಾಡಿದರೆ, ಅದು ನಮ್ಮನ್ನು ಮುಕ್ತಿಯೆಡೆಗೆ ಕೊಂಡೊಯ್ಯುತ್ತದೆ.

ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರು ನಿಮ್ಮೆಲ್ಲರನ್ನು ಸರಿಯಾದ ಮಾರ್ಗದಲ್ಲಿ ನಡೆಸಲಿ ಹಾಗೂ ನಿಮ್ಮೆಲ್ಲರ ಹೃದಯಗಳನ್ನೂ ಪ್ರೀತಿ, ಶಕ್ತಿ, ಶಾಂತಿಗಳಿಂದ ತುಂಬಲಿ ಎಂದು ಅವರಲ್ಲಿ ಪ್ರಾರ್ಥಿಸುತ್ತೇನೆ.

ಓಂ ತತ್ ಸತ್.

ಸ್ವಾಮಿ ಗಹನಾನಂದ
ಅಧ್ಯಕ್ಷರು, ರಾಮಕೃಷ್ಣ ಮಠ ಮತ್ತು ಮಿಷನ್

## ರಾಮಕೃಷ್ಣ ಮಿಷನ್ನಿನ ೨೦೦೫–೦೬ನೇ ಸಾಲಿನ ಆಡಳಿತ ಮಂಡಳಿಯ ವರದಿ

ರಾಮಕೃಷ್ಣ ಮಿಷನ್ನಿನ ೯೭ನೆಯ ವಾರ್ಷಿಕ ಸಭೆಯು ೨೦೦೬, ಡಿಸೆಂಬರ್ ೧೭ರಂದು ಭಾನುವಾರ ಮಧ್ಯಾಹ್ನ ೩.೩೦ ಗಂಟೆಗೆ ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ನಡೆಯಿತು.

ಪ್ರಸಕ್ತ ಸಾಲಿನಲ್ಲಿ ಗುಜರಾತಿನ **ವಡೋದರ**, ಮಹಾರಾಷ್ಟ್ರದ **ಔರಂಗಾಬಾದ್** ಹಾಗೂ ಆಂಧ್ರಪ್ರದೇಶದ **ಕಡಪದಲ್ಲಿ ರಾಮಕೃಷ್ಣ ಮಿಷನ್** ನೂತನ ಶಾಖಾ ಕೇಂದ್ರಗಳನ್ನು ಸ್ಥಾಪಿಸಿದೆ.

**ವೈದ್ಯಕೀಯ ಕ್ಷೇತ್ರದಲ್ಲಿ** ಈ ಸಾಲಿನಲ್ಲಿ ವಿಶೇಷವಾಗಿ ಉಲ್ಲೇಖಯೋಗ್ಯವಾದ ಸಂಗತಿಗಳು ಹೀಗಿವೆ: ಮುಝಫರ್ ಪುರ್ ಶಾಖೆಯ ಚಿಕಿತ್ಸಾಲಯದಲ್ಲಿ ನೇತ್ರ ವಿಭಾಗ, ಪಶ್ಚಿಮ ಬಂಗಾಳದ ಕಾಮಾರಪುಕುರ್ ಶಾಖೆಯಲ್ಲಿ ನೇತ್ರ ಶಸ್ತ್ರಚಿಕಿತ್ಸೆಯ ವಿಭಾಗವನ್ನು ಹೊಂದಿದ ಧರ್ಮಾರ್ಥ ಔಷಧಾಲಯ, ಬೃಂದಾವನ ಸೇವಾಶ್ರಮದಲ್ಲಿ ಇಂಟೆನ್ಸಿವ್ ಕೇರ್ ಯೂನಿಟ್ ಮತ್ತು ಶಸ್ತ್ರಚಿಕಿತ್ಸಾ ವಿಭಾಗದ ಸಮುಚ್ಚಯ, ಇಟಾನಗರ್ ಶಾಖೆಯಲ್ಲಿ ಸಂಚಾರಿ ಚಿಕಿತ್ಸಾ ಘಟಕ, ಲಕ್ನೋ ಶಾಖೆಯ ಪಾಲಿಕ್ಲಿನಿಕ್‌ನಲ್ಲಿ ರಕ್ತದ ಅಂಶಗಳ ವಿಭಜನೆಯ ಘಟಕ,

ಹಾಗೂ ನವೀಕರಣಗೊಂಡ ನ್ಯೂರೊಸರ್ಜರಿ ವಾರ್ಡ್‌ಗಳನ್ನು ಆರಂಭಿಸಲಾಗಿದೆ.

**ಶೈಕ್ಷಣಿಕ ಕ್ಷೇತ್ರದಲ್ಲಿ** ಕೊಯಮತ್ತೂರು ಕೇಂದ್ರದಲ್ಲಿ ವಿವೇಕಾನಂದ ಪರಿಗಣಿತ ವಿಶ್ವವಿದ್ಯಾನಿಲಯದಡಿ ಬಿ.ಎಡ್. ಹಾಗೂ ಎಂ.ಎಡ್. ಕೋರ್ಸ್‌ಗಳಲ್ಲಿ ವೈಕಲ್ಯತೆಗಳ ನಿರ್ವಹಣಾ ವ್ಯಾಸಂಗ ಶಾಖೆ ಹಾಗೂ ವಿಶೇಷ ಶಿಕ್ಷಣದ ವಿಭಾಗಗಳು, ಕೊಲ್ಕತಾದ ಸೇವಾ ಪ್ರತಿಷ್ಠಾನ್‌ದ ನರ್ಸಿಂಗ್ ಕಾಲೇಜ್‌ನಲ್ಲಿ ಬಿ.ಎಸ್‌ಸಿ. (ಆನರ್ಸ್) ಕೋರ್ಸ್, ನರೇಂದ್ರಪುರ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಸ್ನಾತಕೋತ್ತರ ವಿಭಾಗ, ಚೆನ್ನೈನ ವಿವೇಕಾನಂದ ಕಾಲೇಜಿನಲ್ಲಿ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಅಲ್ಗಳ್ ಟೆಕ್ನಾಲಜಿ ವಿಭಾಗ, ಪೋರ್‌ಬಂದರ್ ಕೇಂದ್ರದಲ್ಲಿ ವಿವೇಕಾನಂದ ಮೌಲ್ಯಶಿಕ್ಷಣ ಹಾಗೂ ಸಾಂಸ್ಕೃತಿಕ ಸಂಸ್ಥೆ (Vivekananda Institute of Value Education and Culture–VIVEC) ಮತ್ತು ಪಶ್ಚಿಮ ಬಂಗಾಳದ ಕೂಚ್‌ಬಿಹಾರ್, ಜಲ್ಪಾಯ್‌ಗುರಿ, ಮಾಲ್ಡಾ, ಬೇಲೂರಿನ ಶಾರದಾಪೀಠ ಶಾಖೆಗಳಿಂದ ಜೈಲುಗಳಲ್ಲಿ ಹಾಗೂ ಸುಧಾರಣಾಗೃಹಗಳಲ್ಲಿ ಅನೌಪಚಾರಿಕ ಶಿಕ್ಷಣ, ವೃತ್ತಿಪರ ಶಿಕ್ಷಣ, ಸ್ವಾಸ್ಥ್ಯದ ಅರಿವನ್ನು ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ವಿಶೇಷವಾಗಿ ಉಲ್ಲೇಖನೀಯ. ಇವಲ್ಲದೆ ಕೊಯಮತ್ತೂರು ಶಾಖೆಯ ಕಾಲೇಜ್ ಆಫ್ ಎಜುಕೇಷನ್ ಮತ್ತು ಮಾರುತಿ ದೈಹಿಕ ಶಿಕ್ಷಣ ಕಾಲೇಜಿಗೆ ಕ್ರಮವಾಗಿ ಗ್ರೇಡ್– ಎ ಹಾಗೂ ಗ್ರೇಡ್– ಬಿ++ ಸ್ಥಾನಗಳನ್ನು ಭಾರತದ ರಾಷ್ಟ್ರೀಯ ಅಸೆಸ್‌ಮೆಂಟ್ ಮತ್ತು ಅಕ್ರೆಡಿಟೇಷನ್ ಕೌನ್ಸಿಲ್ (ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನ ಸ್ವಾಯತ್ತತಾ ಸಂಸ್ಥೆ) ನೀಡಿದೆ.

**ಗ್ರಾಮೀಣ ವಿಕಾಸ ಕ್ಷೇತ್ರದಲ್ಲಿ**, ಭಾರತ ಸರ್ಕಾರದ ಗ್ರಾಮೀಣ ವಿಕಾಸ ಸಚಿವಾಲಯವು ದೇಶದಲ್ಲಿ ಗ್ರಾಮೀಣ ನೈರ್ಮಲ್ಯ ಅಭಿವೃದ್ಧಿಯಲ್ಲಿ ಪಶ್ಚಿಮ ಬಂಗಾಳದ ನರೇಂದ್ರಪುರ ಶಾಖೆಯ ಲೋಕಶಿಕ್ಷಾ ಪರಿಷತ್ತು ಸಲ್ಲಿಸಿರುವ ಅಪೂರ್ವಸೇವೆಯನ್ನು ಗುರುತಿಸಿ 'ನಿರ್ಮಲ್ ಗ್ರಾಮ್ ಪುರಸ್ಕಾರ'ವನ್ನು ನೀಡಿದೆ. ಲೋಕಶಿಕ್ಷಾ ಪರಿಷತ್ತಿನ ಕೆಲವು ಸಾಧನೆಗಳನ್ನು ಹೆಸರಿಸಬಹುದಾದರೆ: (ಅ) ೬೫,೧೦೦ ಕಡಿಮೆ ವೆಚ್ಚದ ಶೌಚಾಲಯಗಳ ನಿರ್ಮಾಣ ಹಾಗೂ ೯,೫೬,೦೭೬ ಜನರಿಗೆ ಆರೋಗ್ಯ, ಶುಚಿತ್ವ ಹಾಗೂ ಸುರಕ್ಷಿತ ಜಲಸೇವನೆಯ ಬಗ್ಗೆ ಶಿಕ್ಷಣ (ಆ) ಪಶ್ಚಿಮ ಬಂಗಾಳದ ೧೧೮ ಬ್ಲಾಕ್‌ಗಳಲ್ಲಿ ಆರ್ಸೆನಿಕ್ ಮತ್ತು ಕಬ್ಬಿಣದ ಅಂಶಗಳನ್ನು ಬೇರ್ಪಡಿಸುವ ಶೋಧಕಯಂತ್ರಗಳನ್ನು ಒದಗಿಸಿರುವುದು (ಇ) ಪಶ್ಚಿಮ ಬಂಗಾಳದ ಮೂರು ಜಿಲ್ಲೆಗಳಲ್ಲಿ ಅರಣ್ಯದ ಅಂಚಿನ ನಿವಾಸಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ೬,೩೧೫ ಬುಡಕಟ್ಟು ಕುಟುಂಬಗಳಿಗೆ ಒದಗಿಸಿರುವುದು.

**ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ** ಉಲ್ಲೇಖನೀಯವಾದುವುಗಳು **ಹೀಗಿವೆ:** ಆಂಧ್ರಪ್ರದೇಶದ ಕಡಪ, ತಮಿಳುನಾಡಿನ **ಕೊಯಮತ್ತೂರಿನಲ್ಲಿ ನೂತನ ಶಾಖೆ**ಗಳ ಪ್ರಾರಂಭ; ರಾಜಕೋಟ್ ಆಶ್ರಮದಿಂದ ಕಛ್ ಜಿಲ್ಲೆಯ ಆದಿಪುರ್ ಮತ್ತು ಧನೇತಿಗಳಲ್ಲಿ ಮಹಿಳೆಯರಿಗಾಗಿ ಹೊಲಿಗೆ ಮತ್ತು ಕಸೂತಿ ಘಟಕಗಳ ಉದ್ಘಾಟನೆ.

ವಿದೇಶಗಳಲ್ಲಿ, ಈ ಅವಧಿಯಲ್ಲಿ, ಮುಂದೆ ದಾಖಲಿಸಿರುವ **ಹೊಸ ಉಪಶಾಖೆಗಳನ್ನು** ಆರಂಭಿಸಲಾಯಿತು: ಅಮೆರಿಕದ ಸೇಂಟ್ ಲೂಯಿಸ್ ಶಾಖೆಯ ಒಂದು ಉಪಶಾಖೆ ಹಾಗೂ ಬ್ರೆಜಿಲ್‌ನ ಸಾವ್ ಪಾವ್ಲೊ ಶಾಖೆಯಡಿ ಮೂರು ಉಪಶಾಖೆಗಳು. ಅಮೆರಿಕದ ಫ್ಲಾರಿಡಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ **ನೂತನ ಮಠದ ಶಾಖೆ**ಯನ್ನು ಆರಂಭಿಸಲಾಯಿತು.

ಈ ಸಾಲಿನಲ್ಲಿ ದೇಶದ ಹಲವಾರು ಭಾಗಗಳಲ್ಲಿ ೧೪.೩೪ **ಕೋಟಿ** ರೂ.ಗಳ ವೆಚ್ಚದಲ್ಲಿ ವ್ಯಾಪಕವಾದ **ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮ**ಗಳನ್ನು ಮಠ ಮತ್ತು ಮಿಷನ್ ಕೈಗೊಂಡಿದ್ದುವು. ೨,೦೭೫ ಗ್ರಾಮಗಳಲ್ಲಿನ ೧.೭೧ ಲಕ್ಷ ಕುಟುಂಬಗಳಿಗೆ ಸೇರಿದ ಸುಮಾರು ೧೦.೨೧ ಲಕ್ಷ ಜನರು ಈ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದಿದ್ದಾರೆ.

**ಜನತೆಯ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ** ೫.೩೫ ಕೋಟಿ ರೂ.ಗಳನ್ನು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣವೇತನ (Scholarships); ವೃದ್ಧರು, ರೋಗಿಗಳು ಮತ್ತು ಅನಾಥರಿಗೆ ಧನ ಸಹಾಯ ಮುಂತಾದವುಗಳಿಗೆ ಖರ್ಚು ಮಾಡಲಾಯಿತು.

೧೫ ಆಸ್ಪತ್ರೆಗಳು, ೧೭೮ ಚಿಕಿತ್ಸಾಲಯಗಳ (ಸಂಚಾರಿ ಚಿಕಿತ್ಸಾಲಯಗಳೂ ಸೇರಿದಂತೆ) ಮೂಲಕ ೮೨.೭೧ ಲಕ್ಷಕ್ಕೂ ಹೆಚ್ಚು ಜನರಿಗೆ **ವೈದ್ಯಕೀಯ ಸೌಲಭ್ಯಗಳನ್ನು** ಒದಗಿಸಲಾಯಿತು. ಇದಕ್ಕೆ ತಗಲಿದ ಒಟ್ಟು ಖರ್ಚು ೫೬.೪೫ ಕೋಟಿ ರೂ.ಗಳು.

ಬಾಲವಿಹಾರದಿಂದ ಹಿಡಿದು ಸ್ನಾತಕೋತ್ತರ ತರಗತಿಗಳವರೆಗೆ ೬.೨೫ ಲಕ್ಷ ವಿದ್ಯಾರ್ಥಿಗಳು ರಾಮಕೃಷ್ಣ ಮಠ ಮತ್ತು ಮಿಷನ್ ಶಿಕ್ಷಣಸಂಸ್ಥೆಗಳ ಪ್ರಯೋಜನವನ್ನು ಪಡೆದಿರುವರು. ಇವರಲ್ಲಿ ೨.೮೮ ಲಕ್ಷಕ್ಕೂ ಹೆಚ್ಚಿನವರು ವಿದ್ಯಾರ್ಥಿನಿಯರು. ಪ್ರಸಕ್ತ ವರ್ಷದಲ್ಲಿ **ಶಿಕ್ಷಣಕಾರ್ಯಕ್ಕಾಗಿ** ೯೮.೭೧ ಕೋಟಿ ರೂ.ಗಳನ್ನು ವಿನಿಯೋಗಿಸಲಾಯಿತು.

**ಗ್ರಾಮೀಣ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು** ಹಮ್ಮಿಕೊಳ್ಳಲಾಗಿತ್ತು; ಈ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಿದ ಒಟ್ಟು ಹಣ ೧೭.೯೪ ಕೋಟಿ ರೂ.ಗಳು.

**ನಮಗೆ ಈ ನಿಟ್ಟಿನಲ್ಲಿ ನಿರಂತರವಾಗಿ ಸಹಾಯ ಹಾಗೂ ಸಹಕಾರ ನೀಡುತ್ತಿರುವ ಸದಸ್ಯರಿಗೆ ಹಾಗೂ ಸ್ನೇಹಿತರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಕೃತಜ್ಞತೆಯೊಂದಿಗೆ ಸಲ್ಲಿಸುತ್ತೇವೆ.**

ಸ್ವಾಮಿ ಸ್ಮರಣಾನಂದ
(ಪ್ರಧಾನ ಕಾರ್ಯದರ್ಶಿಗಳು)

**17.12.2006**